ದಿನಾಂಕಃ 26-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

1) ವಾದಿ ಮತ್ತು ಪ್ರತಿವಾದಿಗಳು ನಮ್ಮ ಗ್ರಾಮದವರಾಗಿದ್ದು ಸುಮಾರು ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ನನ್ನ ಸಂಬಂಧಿಕರು. ಸರ್ವೆ ನಂ. 342 ರಲ್ಲಿರುವ ಒಂದು ಎಕರೆ ವಿಸ್ತೀರ್ಣದ ಆಸ್ತಿಗೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಕರಾರು ಆಗಿರುತ್ತದೆ. ಕರಾರು ಪತ್ರದ ವ್ಯವಹಾರ ವಾದಿ ಸಾಕ್ಷಿ 2 ರವರ ಕಛೇರಿಯಲ್ಲಿ ಆಗಿರುತ್ತದೆ. ದಿಃ 20-09-2021 ರಂದು ಸದರಿ ಕರಾರು ಪತ್ರ ಆಗಿರುತ್ತದೆ. ವಾದಿ ಪ್ರತಿವಾದಿಗಳಿಗೆ ಎಂಟು ಲಕ್ಷ ಹಣವನ್ನು ಒಂದೇ ಕಂತಿನಲ್ಲಿ ನಗದು ರೂಪದಲ್ಲಿ ನೀಡಿರುತ್ತಾರೆ. ನಾನು ಕರಾರು ಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

2) ಕರಾರು ಪತ್ರದಲ್ಲಿ ಒಂದು ವರ್ಷದ ಅವಧಿ ನಿಗಧಿಪಡಿಸಿರುತ್ತಾರೆ. ಕರಾರು ಪತ್ರ ತಯಾರು ಮಾಡುವ ಕಾಲಕ್ಕೆ ವಾದಿ, ಪ್ರತಿವಾದಿ ಮತ್ತು ನಾನು ಹಾಜರಿದ್ದೆ. ಕರಾರು ಪತ್ರಕ್ಕೆ ನನ್ನ ಜೊತೆ ಲೋಕೇಶ್ ನಾಯಕ್ ಸಹಿ ಮಾಡಿರುತ್ತಾರೆ. ದಾವಾ ಸ್ವತ್ತು ಆನಂದ್ ಕುಮಾರ್ ರವರಿಗೆ ಸೇರಿರುತ್ತದೆ. ವಾದಿ ದಾವಾ ಸ್ವತ್ತನ್ನು ಪ್ರತಿವಾದಿಗಳಿಗೆ ಭೋಗ್ಯ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಂಟು ಲಕ್ಷ ಹಣಕ್ಕಾಗಿ ಭೋಗ್ಯ ಪತ್ರ ಮಾಡಿದ್ದು ಆದರೆ ನಾವುಗಳು ಕರಾರು ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

ದಿನಾಂಕಃ 26-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

1) ಕರಾರು ಪತ್ರವನ್ನು ನಮ್ಮ ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ. ದಿಃ 20-09-2021 ರಂದು ಸದರಿ ಕರಾರು ಪತ್ರವನ್ನು ತಯಾರು ಮಾಡಿರುತ್ತೇನೆ. ನಿಪಿ 1 ಕರಾರು ಪತ್ರದಡಿಯಲ್ಲಿ ವಾದಿ ಪ್ರತಿವಾದಿಗಳಿಗೆ ಮುಂಗಡವಾಗಿ ಎಂಟು ಲಕ್ಷ ಹಣವನ್ನು ಪಾವತಿ ಮಾಡಿರುತ್ತಾರೆ. ಸದರಿ ಹಣವನ್ನು ನಮ್ಮ ಕಛೇರಿಯಲ್ಲಿ ಪಾವತಿ ಮಾಡಿರುತ್ತಾರೆ. ಸದರಿ ಹಣವನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಿರುತ್ತಾರೆ. ವಿವಾದ ಸ್ವತ್ತು ಆನಂದ್ ಕುಮಾರ್ ರವರ ಹೆಸರಿನಲ್ಲಿ ಇರುತ್ತದೆ. ಆನಂದ್ ಕುಮಾರ್ ರವರಿಗೆ ಬಿಡುಗಡೆ ಪತ್ರದ ಮೂಲಕ ಆಸ್ತಿ ವರ್ಗಾವಣೆ ಆಗಿರುತ್ತದೆ. ಬಿಡುಗಡೆ ಪತ್ರದ ಬಗ್ಗೆ ಕರಾರು ಪತ್ರದಲ್ಲಿ ನಮೂದು ಮಾಡಿರುತ್ತೇನೆ. ನಿಪಿ-1 ಪತ್ರ ತಯಾರು ಮಾಡುವ ಕಾಲಕ್ಕೆ ವಾದಿ ಮತ್ತು ಪ್ರತಿವಾದಿಗಳು ಮತ್ತು ಸಾಕ್ಷಿದಾರರು ಇದ್ದರು.

2) ಪ್ರತಿವಾದಿಗಳು ಭೋಗ್ಯ ಪತ್ರ ತಯಾರು ಮಾಡಲು ನನ್ನ ಬಳಿ ಬಂದಿದ್ದು ನಾನು ಭೋಗ್ಯ ಪತ್ರ ಮಾಡದೇ ಕರಾರು ಪತ್ರ ತಯಾರು ಮಾಡಿರುತ್ತೇನೆ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ